O.S. ನಂಬರಃ 83/2023
ಪಿ. ಡಬ್ಲ್ಯೂಃ 1

ದಿಃ 16-12-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

8. ಗಣಪಿ ದೇವು ಗೌಡ ನಿಮ್ಮ ಜೊತೆಗೆ ವಾಸ್ತವ್ಯ ಇದ್ದರು ಎಂದು ತೋರಿಸಲು ಆಧಾರ ಕಾರ್ಡ ಅಥವಾ ರೇಷನ್ ಕಾರ್ಡ ಏನಾದರೂ ಇದೆಯಾ ಎಂದರೆ ಸಾಕ್ಷಿಯ ಕಾಣೆಯಾಗಿರುತ್ತವೆ ಎಂದು ನುಡಿಯುತ್ತಾರೆ. ನಿಮ್ಮ ಮನೆಯಿಂದ ಮಾಣಿಗದ್ದೆ ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿಯು 2 ಕಿ.ಮೀ ಆಗುತ್ತದೆ ಎಂದು ನುಡಿಯುತ್ತಾರೆ. ಕಾಣೆಯಾದ ಆಧಾರ ಕಾರ್ಡ ಅಥವಾ ರೇಷನ್ ಕಾರ್ಡ ಇವುಗಳ ಪ್ರತಿಯನ್ನು ಸರಕಾರದಿಂದ ಪಡೆದುಕೊಳ್ಳಲು ಏನಾದರೂ ಪ್ರಯತ್ನಪಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಗಣಪಿ ದೇವು ಗೌಡ ಇವರ ಆಧಾರ ಕಾರ್ಡ ಅಥವಾ ರೇಷನ್ ಕಾರ್ಡ ಗಳು ಮಾಣಿಗದ್ದೆಯಲ್ಲಿ ಪ್ರತ್ಯೇಕವಾಗಿ ಇದ್ದವು ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ, ನನಗೆ ಓದಲು ಬರೆಯಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಗಣಪಿ ಗಂಡ ದೇವು ಗೌಡ ಎಂದರೆ ನನ್ನ ತಂದೆಯ ತಮ್ಮ ಆಗಿರುತ್ತಾರೆ. ಗಣಪಿ ದೇವು ಗೌಡ 1999 ನೇ ಸಾಲಿನಲ್ಲಿ ನಿಮ್ಮ ವಿರುದ್ಧ ತನ್ನ ಗಂಡನಿಗೆ ಬಂದಂತಹ ಆಸ್ತಿಗಳಲ್ಲಿ ಪಾಲುವಾಂಟಣಿ ಕೇಳಿಕೊಂಡು ದಾವೆ ಸಲ್ಲಿಸಿದ್ದಳು ಎಂದರೆ ಸರಿ. ಪಾಲುವಾಂಟಣಿ

ಮಾಡುವ ಸಂದರ್ಭದಲ್ಲಿ ನೀವು ಮತ್ತು ಗಣಪಿ ದೇವು ಗೌಡ ಒಂದೇ ಕಡೆ ಇದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಯಾವ ಕಾರಣಕ್ಕಾಗಿ ಆಕೆಯು ನಿಮ್ಮ ವಿರುದ್ಧ ವಾಂಟಣಿ ದಾವೆಯನ್ನು ಮಾಡುತ್ತಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ಅರ್ಧ ಪಾಲು ಗಣಪಿಗೆ ಕೊಡಬೇಕು ಎಂದು ಡಿಕ್ರಿಯಾದ ನಂತರ ಅದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುತ್ತೀರಿ ಎಂದರೆ ಸರಿ. ಮೇಲ್ಮನವಿ ವಜಾ ಆಗಿದ್ದು, ಅದರ ವಿರುದ್ಧ ಮತ್ತೆ ಅದನ್ನು ಪ್ರಶ್ನಿಸಿ ಮೇಲ್ಮನವಿ ಹೋಗಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪಾಲು ವಾಂಟಣಿಯ ಡಿಕ್ರಿ ಯ ಪ್ರಕಾರ ದಾವಾ ಆಸ್ತಿಯನ್ನು ಸರ್ವೆ ಮಾಡಲು ಎಫ್ ಡಿ ಪಿ ನಂ.6/2006 ರಂತೆ ಇದೆ ನ್ಯಾಯಾಲಯದಲ್ಲಿ ಸಲ್ಲಿಸಿದ್ದಳು ಎಂದರೆ ಸರಿ. ನಂತರ ಸರ್ವೆಯರ ಬಂದು ಅಳತೆ ಮಾಡಿ, ಪಾಲು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸರ್ವೆಯರ್ ಬಂದಿದ್ದರು ಎಂದು ನುಡಿಯುತ್ತಾರೆ. ಗಣಪಿ ದೇವು ಗೌಡ ಇವರು ಜೀವಂತ ಇರಬೇಕಾದರೆ ನ್ಯಾಯಾಲಯದ ಡಿಕ್ರಿಯ ಪ್ರಕಾರ ದಾವಾ ಆಸ್ತಿಯಲ್ಲಿ ಅರ್ಧ ಪಾಲು ಆಕೆಯ ಹೆಸರಿಗೆ ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ಎಂಟ್ರಿಯಾಗಿರುವುದಿಲ್ಲ, ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ. ಗಣಪಿಗೆ ಹೋದ ಆಸ್ತಿಯಲ್ಲಿ ತನಗೆ ಪಾಲು ಸಿಗಬೇಕು ಎಂದು ಈ ದಾವೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿಯ ಹೌದು ನಮ್ಮ ಆಸ್ತಿ ನಮಗೇ ಬೇಕು ಎಂದು ನುಡಿಯುತ್ತಾರೆ. ಗಣಪಿಗೆ ಹೋದ ಆಸ್ತಿಯನ್ನು ನೀವು ಲಪಟಾಯಿಸಬೇಕು ಎನ್ನುವ ಉದ್ದೇಶದಿಂದ ಈ ರೀತಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಿರಿ ಎಂದರೆ ಸರಿಯಲ್ಲ.

9. ಗಣಪಿ ತೀರಿಕೊಂಡ ನಂತರ ನಾವು ವಾರಸುದಾರರ ಎಂದು ಏನಾದರೂ ತಹಶೀಲ್ದಾರ ಇವರಿಗೆ ಅರ್ಜಿಯನ್ನು ಸಲ್ಲಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಗಣಪಿ ಆಸ್ತಿಗೆ ಪ್ರತಿವಾದಿಯು ವಾರಸುದಾರರು ಎಂದು ವಾರಸಾ ಪ್ರಮಾಣ ಪತ್ರವನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ಸುಳ್ಳು ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಅದು ಸುಳ್ಳು ದಾಖಲೆ ಮಾಡಿಸಿಕೊಂಡಿರುತ್ತಾರೆ ಎಂದು ಎಸಿ ಇವರ ನ್ಯಾಯಾಲಯದಲ್ಲಿ ಮೇಲ್ಮನವಿ ಏನಾದರೂ ಸಲ್ಲಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಪ್ರತಿವಾದಿಯ ಕಬ್ಜಾ ಸಾಗುವಳಿಯಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಪ್ರತಿವಾದಿಯು ಗಣಪಿ ಇವರ ದತ್ತಕ ಮಗಳು ಎಂದರೆ ಸರಿಯಲ್ಲ. ಮತ್ತು ಗಣಪಿಯ ಏಕೈಕ ಸರಳ ವಾರಸದಾರಳು ಎಂದರೆ ಸರಿಯಲ್ಲ. ನಿಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ.

10. ಗಣಪಿ ದೇವು ಗೌಡ ಈಕೆಯ ಮಾಣಿಗದ್ದೆಯಲ್ಲಿ ಮನೆ ಏನಾದರೂ ಇತ್ತಾ ಎಂದರೆ ಸಾಕ್ಷಿಯು ಅದು ದೇವು ಗೌಡನ ಮನೆಯಾಗಿದ್ದು, ಅಲ್ಲಿಯೇ ವಾಸ್ತವ್ಯ ಮಾಡಿಕೊಂಡು ಬರುತ್ತಿದ್ದು, ನಾವು ಆಗಾಗ ಹೋಗಿ ಬರುತ್ತಿದ್ದೇವು ಎಂದು ನುಡಿಯುತ್ತಾರೆ. ಅದು ಗಣಪಿ ದೇವು ಗೌಡ ಮನೆಯಾಗಿದ್ದು, ಆಕೆಯು ತನ್ನ ಗಂಡನ ಕಾಲದಿಂದಲೂ ಅಲ್ಲಿಯೇ ವಾಸ್ತವ್ಯ ಮಾಡಿಕೊಂಡು ಕಬ್ಜಾ ಸಾಗುವಳಿ ಮಾಡಿಕೊಂಡು ಬರುತ್ತಿದ್ದಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.